

## ಮಹೀಂದ್ರಾ ಕಸ್ಟಮೈಸೇಷನ್

ಈಗಾಗಲೇ ಮಾರಾಟವಾಗಿರುವ ತನ್ನ ವಾಹನಗಳನ್ನು ಮಾರ್ಪಡಿಸಲೆಂದೇ ಮಹೀಂದ್ರಾ ಅಂಡ್ ಮಹೀಂದ್ರಾ 'ಮಹೀಂದ್ರಾ ಕಸ್ಟಮೈಸೇಷನ್' ಎಂಬ ಹೊಸ ಬ್ರ್ಯಾಂಡ್ ಅನ್ನೇ ಸ್ಥಾಪನೆ ಮಾಡಿ ಬಹಳ ವರ್ಷಗಳೇ ಕಳೆದಿವೆ.

ಇಲ್ಲಿ ಹಳೆಯ ವಾಹನಗಳನ್ನೂ ಮಾರ್ಪಡಿಸಲಾಗುತ್ತದೆ. ಹೊಸ ವಾಹನಗಳನ್ನೂ ಮಾರ್ಪಡಿಸಿ ಕೊಡಲಾಗುತ್ತದೆ. ಈ ರೀತಿ ಹೊರಬಂದ ಮೊದಲ ಮಹೀಂದ್ರಾ ವಾಹನ ಬೊಲೆರೊ ಸ್ಟಿಂಗರ್. ಸ್ಟಿಂಗರ್‌ನಲ್ಲೇ ಬಹಳಷ್ಟು ಅವತರಣಿಕೆಗಳನ್ನು ಮಹೀಂದ್ರಾ ಕೊಡುತ್ತಿತ್ತು.

ಇವುಗಳ ಜತೆಯಲ್ಲಿ ಸ್ಕಾರ್ಪಿಯೊ ಡಾರ್ಕ್ ಹಾರ್ಸ್ ಎಂಬ ಮಾದರಿಯನ್ನೂ ಮಹೀಂದ್ರಾ ನೀಡುತ್ತಿದೆ. ಈ ರೀತಿಯ ಕಸ್ಟಮೈಡ್ ವಾಹನಗಳಲ್ಲಿ ಹೆಚ್ಚು ಸದ್ದು ಮಾಡಿದ್ದು, ಥಾರ್ ಡೇಬ್ರೇಕ್ ಎಡಿಶನ್. 33 ಇಂಚಿನ ದೊಡ್ಡ ಚಕ್ರಗಳು, ವಿಚಿತ್ರವಾದ ಫ್ಲೇರ್‌ಗಳು, ರಿಕವರಿ ವಿಂಚ್, ಪ್ರೊಜೆಕ್ಟರ್ ಹೆಡ್‌ಲ್ಯಾಂಪ್ ಥಾರ್ ಡೇಬ್ರೇಕ್‌ನ ಹೆಗ್ಗುರುತುಗಳು.

ಇದೇ ರೀತಿ ಟಿಯುವಿ 3ಒಒ ಮತ್ತು ಎಕ್ಸ್‌ಯುವಿ 5ಒಒಗಳನ್ನೂ ಕಸ್ಟಮೈಸ್ ಮಾಡಿಕೊಳ್ಳುವ ಸೇವೆಯನ್ನು 'ಮಹೀಂದ್ರಾ ಕಸ್ಟಮೈಸೇಷನ್' ಒದಗಿಸುತ್ತದೆ.

ಅವತರಣಿಕೆಯಲ್ಲಿ ಕಸ್ಟಮೈಸ್ ಮಾಡಲು ಅವಕಾಶವಿರುತ್ತದೆ' ಎಂದು ಕಂಪನಿಯ ಮೂಲಗಳು ಹೇಳಿವೆ. ಆದರೆ ಈ ಬಗ್ಗೆ ಇನ್ನೂ ಅಧಿಕೃತ ಘೋಷಣೆ ಹೊರಬಿದ್ದಿಲ್ಲ. ಇದು ನಿಜವೇ ಆದರೆ, 'ಅಗತ್ಯಕ್ಕೆ ತಕ್ಕಂತೆ ಕಾರನ್ನು ತಯಾರಿಸಿಕೊಳ್ಳುವ ಅವಕಾಶ' ಮೊದಲ ಬಾರಿ ಭಾರತೀಯರಿಗೆ ಒದಗಲಿದೆ. ಇದು ಮಧ್ಯಮ ವರ್ಗದ ಕಾರುಗಳಲ್ಲಿ ಆಗುವುದರಿಂದ ಭಾರತದ ಕಾರು ಮಾರುಕಟ್ಟೆಯಲ್ಲೂ ದೊಡ್ಡದೊಂದು ಬದಲಾವಣೆ ಆಗಬಹುದು. ಏಕೆಂದರೆ ನಮ್ಮಲ್ಲಿ ಸೂಪರ್‌ಸ್ಟಾರ್‌ಗಳನ್ನು ಹಿಂಬಾಲಿಸುವವರ ದೊಡ್ಡ ಗುಂಪೇ ಇದೆ.

ಈ ಬೆಳವಣಿಗೆಯ ಬೆನ್ನಲ್ಲೇ ಮಹೀಂದ್ರಾ ಅಂಡ್ ಮಹೀಂದ್ರಾ ಸಹ ಅಂಥದ್ದೇ ಘೋಷಣೆ ಮಾಡಿದೆ. ಇನ್ನೇನು ಮಾರುಕಟ್ಟೆಗೆ ಬರಲಿರುವ ಕಂಪನಿಯ ಅತ್ಯಂತ ಐಷಾರಾಮಿ ಎಸ್‌ಯುವಿ 'ಎಕ್ಸ್‌ಯುವಿ 7ಒಒ'ನಲ್ಲಿ ಕಸ್ಟಮೈಸ್ ಸೇವೆಯೂ ಇರಲಿದೆ ಎಂದು ಕಂಪನಿಯ ಮೂಲಗಳು ಹೇಳಿವೆ. ಎರಡೂ ಕಂಪನಿಗಳ ಮೂಲಗಳು ಹೇಳುತ್ತಿರುವ ಈ ಮಾತುಗಳು ನಿಜವೇ ಆದಲ್ಲಿ ಭಾರತದ ಕಾರು ಮಾರುಕಟ್ಟೆಯ ಸ್ಥಿತಿಯೇ ಬದಲಾಗಲಿದೆ. ಅದರ ಎಲ್ಲಾ ಲಾಭ ಗ್ರಾಹಕರಿಗೇ ಸಿಗಲಿದೆ.

# ಬಿಳಿ ಕತ್ತಿನ ಕೊಕ್ಕರೆ

■ ಪ್ರಕಾಶ ಎಸ್. ಮನ್ನಂಗಿ

ಚಿತ್ರ: ಆಕಾಶ

ಇದು ಅಪರೂಪದ ಬಿಳಿ ಕತ್ತಿನ ಕೊಕ್ಕರೆ! ಪಸೆ ಆರಿದ ಹೊಂಡದ ಬಳಿಯ ಹುಲ್ಲಿನಲ್ಲಿ ಅದೇನನ್ನೋ ಹುಡುಕುತ್ತಿತ್ತು. ಕುತೂಹಲದಿಂದ ಕಾಯುತ್ತ ಕುಳಿತೆವು. ಒಂದಷ್ಟು ನಿಮಿಷಗಳು ಕಳೆದವು. ಅದು ಕೊಕ್ಕಿನಿಂದ ಏನನ್ನೋ ಜಗ್ಗುತ್ತಿತ್ತು. ನೋಡಿದರೆ ಕೊಕ್ಕರೆಯ ಕೊಕ್ಕಿನಲ್ಲಿ ದೊಡ್ಡದೊಂದು ಕಪ್ಪೆ!

ಕೊಕ್ಕರೆ ಭರ್ಜರಿ ಬೇಟೆಯಾಡಿತ್ತು. ಬೇಟೆಯನ್ನು ಅಲ್ಲಿಂದ ಬಯಲಿಗೆ ತಂದು ತಿನ್ನುವ ಹುನ್ನಾರ ಮಾಡಿತು. ಕೆಳ ಹಾಕಿದರೆ ತಪ್ಪಿಸಿಕೊಂಡೀತೆಂಬ ಆತಂಕ. ಅಂತೂ ಇಂತೂ ಪೇಚಾಡಿ ಬೇಟೆಯನ್ನು ಬಾಯಿಯಲ್ಲಿ ಕಚ್ಚಿಕೊಂಡು ಕಣ್ಮರೆಯಾಯಿತು. ಅಷ್ಟರಲ್ಲಾಗಲೇ ಫೋಟೋಗಳನ್ನು ಕ್ಲಿಕ್ಕಿಸಿಕೊಂಡಿದ್ದೆವು.

ಭಾರತದ ಕೆಲವೇ ರಾಜ್ಯಗಳಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿ ಕಂಡುಬರುವ ಅಪರೂಪದ ಪಕ್ಷಿ ಬಿಳಿ ಕತ್ತಿನ ಕೊಕ್ಕರೆ, ಸಿಕೋನಿಡೇ ಕುಟುಂಬಕ್ಕೆ ಸೇರಿದೆ. ಆಂಗ್ಲ ಭಾಷೆಯಲ್ಲಿ ವೂಲಿ ನೆಕಡ ಸ್ಟಾರ್ಕ ಎಂದೂ, ವೈಜ್ಞಾನಿಕವಾಗಿ ಸಿಕೋನಿಯ ಎಪಿಸ್ಕೋಪಸ್ ಎಂದೂ ಕರೆಯುವರು. ಭಾರತ, ಬಂಗ್ಲಾ, ಭೂತಾನ, ನೇಪಾಳ ಮತ್ತು ಶ್ರೀಲಂಕಾಗಳಲ್ಲಿ ಕಂಡುಬರುತ್ತದೆ.

ಇವು 90 ಸೆಂ. ಮೀ ಎತ್ತರದ ದೊಡ್ಡ ಗಾತ್ರದ, ಉದ್ದನೆಯ ಬಲಿಷ್ಟ ಕಾಲು, ನೀಳವಾದ ಕತ್ತು ಮತ್ತು ಬಲಿಷ್ಟ ಕೊಕ್ಕುಗಳಿರುವ ಪಕ್ಷಿಗಳು. ಉದ್ದ ಹಾಗೂ ಅಗಲವಾದ ರೆಕ್ಕೆಗಳಿವೆ. ಗಿಡ್ಡ ಬಾಲವುಂಟು. ರೆಕ್ಕೆಗಳು ಕಪ್ಪು ಮಿಶ್ರಿತ ನೇರಳೆ ವರ್ಣ, ಕತ್ತು ಬಿಳಿ ಬಣ್ಣದ ತುಪ್ಪಳದಿಂದ ಕೂಡಿದೆ. ಕಾರಣ ಬಿಳಿ ಕತ್ತಿನ ಕೊಕ್ಕರೆ (ಉಣ್ಣೆ ಕತ್ತಿನ ಕೊಕ್ಕರೆ) ಎಂಬ ಹೆಸರು ಬಂದಿದೆ. ಕತ್ತಿನ ಹಿಂಭಾಗದ ಗರಿಗಳು ತಾಮ್ರ ನೇರಳೆ ವರ್ಣದ ಛಾಯೆಯಿಂದ ಕೊಕ್ಕರೆಯ ಅಂದವನ್ನು ಹೆಚ್ಚಿಸಿದೆ.

ಹೆಚ್ಚಾಗಿ ಜೌಗು ಪ್ರದೇಶ, ಕೆರೆ ದಡಗಳಲ್ಲಿ ಕಂಡು ಬರುವ ಇವುಗಳಲ್ಲಿ ಕೆಲವು ಪ್ರಬೇಧಗಳು ವಲಸೆಗಾರ ಪಕ್ಷಿಗಳಾಗಿವೆ. 2–4 ಹಕ್ಕಿಗಳ ಗುಂಪಿನಲ್ಲಿ ಇಲ್ಲವೇ ಒಂಟಿಯಾಗಿರುತ್ತವೆ. ಕಪ್ಪೆ, ಏಡಿ, ಮೀನು ಆಹಾರ. 4000 ದಿಂದ 7000 ಕಿ.ಮೀ. ವರೆಗೆ ಇವು ವಲಸೆ ಹೋಗಬಲ್ಲವು.

ಗಂಡು –ಹೆಣ್ಣಿನಲ್ಲಿ ವ್ಯತ್ಯಾಸವಿಲ್ಲ. ಸಂತಾನಾಭಿವೃದ್ಧಿ ಕಾಲದಲ್ಲಿ ಗಂಡಿನ ರೆಕ್ಕೆಗಳ ವರ್ಣದಲ್ಲಿ ಸ್ವಲ್ಪ ಬದಲಾವಣೆ ಕಾಣಬಹುದು. ಎತ್ತರದ ಮರಗಳ ಮೇಲೆ ಗೂಡು ನಿರ್ಮಿಸಿ 2–3 ಮೊಟ್ಟೆಗಳನ್ನಿಡುತ್ತವೆ. ಈ ಮೋಹಕ ಪಕ್ಷಿಯ ಸಂತತಿ ಗಣನೀಯವಾಗಿ ಕುಸಿದು ಈಗ ಅಳಿವಿನಂಚಿನಲ್ಲಿದೆ.



